# ಆಹಾ ಸುದ್ದಿ!

★ ಸಸಿತೋಟ



ಚೀನಿ ಯುವತಿಯರು ಧರಿಸಿರುವ ಈ ಹೊಸ ಬಗೆಯ ದಿರಿಸಿನ ಹೆಸರು ಫೇಸ್‌ಕಿನಿ. ಈ ಹೆಸರು ಬಿಕಿನಿಯಿಂದ ಬಂದಿರಬಹುದು. ಅಲ್ಲಿಯ ಸಮುದ್ರದಲ್ಲಿ ವಿಪರೀತ ಆಲ್ಗೆಗಳು ಬೆಳೆದಿದ್ದು, ದೇಹವನ್ನು ರಕ್ಷಿಸಿಕೊಳ್ಳಲು ಮೈಮುಚ್ಚುವ ಈ ದಿರಿಸು ಜನಪ್ರಿಯವಾಗಿದೆಯಂತೆ. ಸ್ನಾನ ಮಾಡುವಾಗ ಫೇಸ್‌ಕಿನಿ, ಕಚೇರಿಗೆ ಹೋಗುವಾಗ ಬಿಕಿನಿಯಾ?

ಕಚ್ಚಿದ ಜಾಗ ಭಗಭಗ ಉರಿಯುವಂತೆ ಮಾಡುವ ಕೆಂಪು ಇರುವೆಗೆ ಬೇರೆ ಹೆಸರು ಇಡಿ ಎಂದು ಸಾವಿರಾರು ಅಹವಾಲುಗಳು ಅಮೆರಿಕದ ಅಧ್ಯಕ್ಷ ಒಬಾಮ, ಫೇಸ್‌ಬುಕ್‌ನ ಮಾರ್ಕ್ ಝುಕರ್‌ಬರ್ಗ್ ಅವರಿಗೆ ಬಂದಿವೆಯಂತೆ. ಈ 'ಫೈರ್ ಆ್ಯಂಟ್ಸ್'ಗೆ 'ಸ್ಪೈಸಿ ಬಾಯ್ಸ್' ಎಂಬ ಹೆಸರಿಡುವಂತೆ ಪತ್ರ ಬರೆಯಲಾಗಿದೆಯಂತೆ. ಲಿಂಗ ತಾರತಮ್ಯ ಎಂದು 'ಸ್ಪೈಸ್ ಗರ್ಲ್ಸ್' ಪ್ರತಿಭಟನೆ ಶುರು ಮಾಡಬಹುದು.



ಅಮೆರಿಕಾದ ಅಧ್ಯಕ್ಷೀಯ ಅಭ್ಯರ್ಥಿ ರಿಪಬ್ಲಿಕನ್ ಪಕ್ಷದ ಡೋನಾಲ್ಡ್ ಟ್ರಂಪ್‌ನ ಹತ್ತಾರು ವಿಗ್ರಹಗಳು ಅಲ್ಲಿಯ ಪ್ರಮುಖ ನಗರಗಳಲ್ಲಿ ಇತ್ತೀಚೆಗೆ ಕಾಣಿಸಿಕೊಂಡವಂತೆ. ಟ್ರಂಪ್‌ನ ವಿವಾದಾತ್ಮಕ ಹೇಳಿಕೆಗಳಿಂದ ಹುಮ್ಮಸ್ಸು ಪಡೆದಿರುವ ಯಾರೋ ಕಿಡಿಗೇಡಿಗಳು ಆತನ ಗುಣವನ್ನು ಬೆತ್ತಲೆಗೊಳಿಸುವ ಭರದಲ್ಲಿ ಬೆತ್ತಲೆ ಪುತ್ಥಳಿಗಳನ್ನು ಅಲ್ಲಲ್ಲಿ ಇಟ್ಟಿದ್ದಕ್ಕೆ ಟ್ರಂಪ್ ತಲೆಕೆಡಿಸಿಕೊಂಡಿಲ್ಲವಂತೆ. ಆದರೆ ವಿಗ್ರಹಗಳಲ್ಲಿ ಹೆಣ್ಣಿನ ದೇಹದ ಛಾಯೆಯಿದ್ದು, ಎದುರಾಳಿ ಅಭ್ಯರ್ಥಿ ಹಿಲರಿ ಬಗ್ಗೆ ಯೋಚಿಸುವಂತೆ ಮಾಡಿದೆ. ಇದಕ್ಕೆ ಯಾವ ರೀತಿ ಟ್ರಂಪ್‌ಕಾರ್ಡ್ ಎಸೆಯುತ್ತಾರೋ ನೋಡಬೇಕು.

ರಿಯೋ ಒಲಿಂಪಿಕ್ ಸುದ್ದಿ ನೀಡುತ್ತಿದ್ದ ಬಿಬಿಸಿ ಸ್ಪೋರ್ಟ್ಸ್‌ನ ವರದಿಗಾರ ಡ್ಯಾನ್ ವಾಕರ್‌ನ ಹಿಂಭಾಗದಲ್ಲಿ ಬೀಚ್‌ನಲ್ಲಿನ ಬಿಸಿಬಿಸಿ ದೃಶ್ಯವೊಂದು ಪ್ರಸಾರವಾಗುತ್ತಿತ್ತಂತೆ. ವೀಕ್ಷಕರು ಕಣ್ತುಂಬಿಕೊಂಡ ನಂತರ ಇದರ ಅರಿವಿಲ್ಲದ ಡ್ಯಾನ್‌ಗೆ ಸಾಮಾಜಿಕ ಜಾಲತಾಣದಲ್ಲಿ ಟಾಂಗ್ ನೀಡಿದರಂತೆ. ಆ ಜೋಡಿ ವಿಶಿಷ್ಟ ಭಂಗಿಯಲ್ಲಿ ಪುಸ್ತಕ ಓದುತ್ತಿತ್ತು ಎಂದು ಉತ್ತರಿಸಿದನಂತೆ ಡ್ಯಾನ್. ಕ್ಯಾಮೆರಾ ಝೂಮ್‌ಇನ್ ಮಾಡುವ ಧೈರ್ಯ ತೋರಿದ್ದರೆ ಒಲಿಂಪಿಕ್ ಕ್ರೀಡೆ ಬದಲು ಇನ್ನಾವುದೋ ಕ್ರೀಡೆಯ ವರದಿಗಾರನಾಗಿಬಿಡುತ್ತಿದ್ದ.



ಅಮೆರಿಕಾದ ಇಬ್ಬರು ಸ್ನೇಹಿತರು ಕಂಡುಕೊಂಡು ಹೊಸ ಬಗೆಯ ಯೋಗ. ಅವರಿಬ್ಬರ ಬೈಸಿಕಲ್ ಹಾಗೂ ಯೋಗದ ಮೇಲಿನ ಪ್ರೇಮ ಎರಡನ್ನೂ ಸೇರಿಸಲು ಕಾರಣವಂತೆ. ನಾಯಿಯ ಮೇಲಿನ ಪ್ರೇಮ ಡೋಗಾ ಆದರೆ, ಇದು ಬೈಗಾ ಇರಬಹುದು.

ಪ್ಯಾಲೆಸ್ಟೀನ್‌ನಲ್ಲಿ ಈಗ ಮದುವೆ ಸುಗ್ಗಿಯಂತೆ. ಆದರೆ ಮದುವೆಗೆ ಬರುವ ಅತಿಥಿಗಳೇ ಭರ್ಜರಿ ಊಟದ ಖರ್ಚು ವಹಿಸಬೇಕಾಗಿದ್ದು, ಸಂಕಟ ತಂದಿದೆಯಂತೆ. ನಮ್ಮಲ್ಲಿಯೂ ಆ ಪದ್ಧತಿ ಅಳವಡಿಸಿಕೊಂಡರೆ ಛತ್ರಗಳೆಲ್ಲ ಗುಳೆ ಏಳಬಹುದು.

